(ಐ) ಹೈಕೋರ್ಟ್‌ನಲ್ಲಿ ಕೇಸುಗಳ ಇತ್ಯರ್ಥಕ್ಕೆ ಸಂಬಂಧಪಟ್ಟಂತೆ ಬಂದಿರುವ ಪತ್ರಿಕಾ ಹೇಳಿಕೆ

Smt .S. Pramila Nesargi (CHAMARAJ PET) : Mr. Speaker Sir, a News item has appeared in the Indian Express dated 18th March under the caption "He Judge sets record; disposes 3,00 cases in 180 days".

ಬಹಳ ಒಳ್ಳೆಯದು. ಆದರೆ ಆ ಬಗ್ಗೆ ನಮ್ಮ ತಕರಾರು ಏನೂ ಇಲ್ಲ. ಆದರೆ ಅದರಲ್ಲಿನ ಒಂದು ವಾಕ್ಯವನ್ನು ಮಾನ್ಯ ಮುಖ್ಯ ಮಂತ್ರಿಗಳು ಗಮನಿಸಬೇಕು. "Usually a High court Judge's portfoli is changed thrice a year. In my case, the Chief Justice asked me whether I was happy with what I was doing and I said 'Yes', ; he quipped.

Further he says, (I am not quoting the name)-

"I attribute the success to the "art of managing advocates". Judges and advocates are like husband and wife, he says."

"You cajole the wife to get her do something", he says, "Similarly, I cajole the lawyers by reminding them about the benefits of speedy disposal."

ನನಗೆ ಬಹಳ ದುಃಖ ತಂದಿರತಕ್ಕಂಥ ವಿಚಾರವೇನೆಂದರೆ ಸಂಸಾರದಲ್ಲಿ ಗಂಡ ಹೆಂಡತಿ ಇರುವುದು ನಿಜ. ಆದರೆ ಜಡ್ಜಸ್ ಮತ್ತು ಅಡ್ವೋಕೇಟ್ಸ್‌ಗಳನ್ನು ಗಂಡ ಹೆಂಡತಿ ಎಂಬುದಾಗಿ ತೀರ್ಮಾನ ಮಾಡುವುದಾಗಲಿ ಅಥವಾ ಕೆಜೋಲ್ ಮಾಡಿಬಿಟ್ಟರೆ ಹೆಂಡತಿಯ ಹತ್ತಿರ ಏನಾದರೂ ಕೆಲಸ ಮಾಡಿಸಿಕೊಳ್ಳಬಹುದು, ಅದೇ ಪ್ರಕಾರ ಅಡ್ವೋಕೇಟ್ ಹತ್ತಿರ ಕೆಜೋಲ್ ಮಾಡಿ ಕೆಲಸ ಮಾಡಿಸಿಕೊಳ್ಳುತ್ತಾರೆ ಎಂದರೆ ಇದಕ್ಕಿಂತ ದುಃಖಕರವಾದ ಸ್ಥಿತಿ ಎಲ್ಲೂ ಇಲ್ಲ. I am also a wife and I am an Advocate..... Advocates profesion is a dignified profession. A wife's duty is also a dignified one. A dignity of woman is more there.

ಅದು ಬಹಳ ದುಃಖದ ಸಂಗತಿ. ಇಡೀ ಮಾನವ ಕುಲದ ಹೆಣ್ಣು ಮಕ್ಕಳ ಬಗ್ಗೆ ಹೇಳುವುದಾದರೆ ಪತ್ನಿಯಾಗಿ ಅವಳು ಕೆಲಸವನ್ನು ನಿರ್ವಹಣೆ ಮಾಡತಕ್ಕಂತಹ ಸಂದರ್ಭದಲ್ಲಿ ಕೆಜೋಲ ಮಾಡಿ ಕೆಲಸ ಮಾಡಿಸಿಕೊಳ್ಳುತ್ತೇನೆ ಎಂದರೆ ಅದನ್ನು ಯಾವ ಪತ್ನಿಯೂ ಒಪ್ಪುವುದಿಲ್ಲ. I take objection to that word ಅದು ಕೆಜೋಲ ಮಾಡತಕ್ಕಂಥ ಕೆಲಸವೂ ಅಲ್ಲ, ಕೆಜೋಲ್ ಮಾಡಿ ಏನಾದರೂ ಕೆಲಸ ಮಾಡಿಸಿಕೊಳ್ಳುವುದಕ್ಕೆ ಸಾಧ್ಯವಿದೆ ಎಂದರೆ ಅದನ್ನು ಯಾವ ಹೆಂಡತಿ ಕೂಡ ಒಪ್ಪುವುದಕ್ಕೆ ಸಾಧ್ಯವಿಲ್ಲ. Similarly an advocate cannot be treated as wife. ಈ ವಿಷಯ ನನಗೆ ಬಹಳ ದುಃಖ ತಂದಿದೆ.

ಅಧ್ಯಕ್ಷರು:- ಅವರಿಗೆ ಅನುಭವ ಇಲ್ಲ ಬಿಡಿ. It is the other way round also in some cases ಅವರ ಅನುಭವ ಹಾಗೆ ಇದೆ ಎಂದು ಕಾಣುತ್ತದೆ. In some cases, wife needs to cajole her husband, I fully endorse your views. Alright let me hear the Hon'ble Law Minster.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಇದು ಎಲ್ಲಾ ಹೆಣ್ಣು ಮಕ್ಕಳಿಗೂ ಸಂಬಂಧಪಟ್ಟದ್ದು.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಇದಕ್ಕೆ ನಾವು ನೇರವಾಗಿ ಸರ್ಕಾರದಿಂದ ಉತ್ತರವನ್ನು ಕೊಡುವುದಕ್ಕೆ ನಮಗೆ ಯಾವುದೇ ಅಧಿಕಾರವಿಲ್ಲ. ಆದುದರಿಂದ ನೀವು ಹೇಳುತ್ತಿರುವಂತೆ ಅದು ಮಹಿಳಾ ಕುಲಕ್ಕೆ ಅವಮಾನ ಎಂಬುದಾಗಿ ತಾವು ಭಾವಿಸುವುದಾದರೆ ಒಬ್ಬ ಮಹಿಳೆಯಾಗಿ, ಪತ್ನಿಯಾಗಿ ಆ ಹೇಳಿಕೆ ಯಿಂದ ತಮಗೂ ಕೂಡ ಗೌರವವಾಗಿದೆ ಎಂಬುದು ತಮ್ಮ ಮನಸ್ಸಿನ ಚಿಂತನೆಯಾದರೆ ನಾನು ಒಬ್ಬ ವಕೀಲನಾಗಿ ಒಂದು ಸಲಹೆಯನ್ನು ಮಾಡುತ್ತೇನೆ. ಅದೇನೆಂದರೆ ಒಂದು ಪಬ್ಲಿಕ್ ಇಂಟರೆಸ್ಟ್ ಲಿಟಿಗೇಶನ್ನ್‌ನ್ನು ಅವರ ಮೇಲೆ ಹಾಕಿ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಇದು ಕಾನೂನು ಮಂತ್ರಿಯಾಗಿ ತಾವು ಹೇಳತಕ್ಕಂಥ ಉತ್ತರವಲ್ಲ. I ask you to do it. ತಾವು ಕಾನೂನು ಮಂತ್ರಿಗಳಾಗಿರುವುದರಿಂದ ಇಡೀ ಹೆಣ್ಣು ಮಕ್ಕಳ ಪರವಾಗಿ ತಾವು ಹೋಗಿ ಒಂದು ಪಬ್ಲಿಕ್ ಇಂಟರೆಸ್ಟ್ ಲಿಟಿಗೇಶನ್ ಹಾಕಿ.

Sri. M.C. Nanaiah :- Let all the lady Legislators under your leadership take a lead and do that. As an advocate and not as a Law Minister, I will also assist you.

Mr. Speaker:- The problem is both of you are classmates. If you do this with an understanding. What should be the fate of the presiding officer?

ಶ್ರೀಮತಿ ಪ್ರಮೀಳಾ ನೇಸರ್ಗಿ:- ಮಾನ್ಯ ಅಧ್ಯಕ್ಷರೆ, ತಾವು ನಮ್ಮೊಂದಿಗೆ ಧ್ವನಿಗೂಡಿಸುತ್ತೀರಿ ಎಂದು ನಾನು ಭಾವಿಸಿದ್ದೆ. ಇದು ಹೆಣ್ಣು ಮಕ್ಕಳ ಡಿಗ್ನಿಟಿ ಪ್ರಶ್ನೆ ಅವರ ರಕ್ಷಣೆಗೆ ತಾವು ನಿಲ್ಲಬೇಕು.

ಅಧ್ಯಕ್ಷರು :- ನಾನು ಯಾವಾಗ ನಿಮ್ಮ ವಿಚಾರ ಬಂದಾಗ ಧ್ವನಿಗೂಡಿಸಿಲ್ಲ? ನಾನು ಯಾವಾಗಲೂ ನಿಮ್ಮೊಟ್ಟಿಗಿದ್ದೇನಲ್ಲವೆ?

ಶ್ರೀ ಪಾಟಾಳ್ ನಾಗರಾಜ:- ಹೆಣ್ಣು ಮಕ್ಕಳ ಬಗ್ಗೆ ಅವರು ಯಾವಾಗಲೂ ಬೆಂಬಲ ಕೊಟ್ಟಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳೂ ಬೆಂಬಲ ಕೊಟ್ಟಿದ್ದಾರೆ. ನೀವು ಮುಖ್ಯ ಮಂತ್ರಿಗಳನ್ನು ಕೇಳುವುದೇ ಇಲ್ಲ, ಆದ್ದರಿಂದ ಅವರು ಸುಮ್ಮನೆ ಕುಳಿತಿದ್ದಾರೆ. ನಾಣಯ್ಯನವರನ್ನು ಕೇಳುವುದಕ್ಕೆ ಬದಲಾಗಿ ನೀವು ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿದ್ದರೆ ನಿಮಗೆ ರಕ್ಷಣೆ ಸಿಗುತ್ತಿತ್ತು.

ಅಧ್ಯಕ್ಷರು:- ನಿಮ್ಮ ವಿಶ್ವಾಸಕ್ಕೆ ನಾನು ಋಣಿಯಾಗಿದ್ದೇನೆ. ಆದರೆ ನೀವು ನನ್ನನ್ನು ಅವರ ಪಟ್ಟಿಗೆ ಸೇರಿಸಬೇಡಿರಿ. ಅವರ ಶ್ರೇಣಿಗೆ ಹೋಗಿ ಸೇರುವುದು ಅಷ್ಟು ಸುಲಭವಲ್ಲ. ಅದಕ್ಕೆ ನನಗಿನ್ನೂ ಟೈಮ್ ಬೇಕಾಗಿದೆ.